doc - 334
T.P-2

(1)

R No KRNN 12 ಶ್ರೀ 18 - 10 -1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಜಾರಕ್ಷಿತಿಕ ಎಂ. ಎಸ್. ಕೃಷ್ಣರಾವ್ (3 ಪೈಸೆ)

ಕರ್ನಾಟಕ ನಟಿವ ನಂಪುಟದ ಮರುರಚನೆ

ಮೊಟ್ಟಮೊದಲು ಭರ್ತಿ

ಹೈದರಾಬಾದು — ಪ್ರಪಂಚದಲ್ಲೇ ಅತಿ ಎತ್ತರ ಗಾರೆ ಅಣೆಕಟ್ಟಾದ ನಾಗಾರ್ಜುನ ಸಾಗರದಲ್ಲಿ ಮೊಟ್ಟಮೊದಲಾಗಿ ಸಂಪೂರ್ಣ ಜಾಸ್ತಾನು ಶಕ್ತಿ 590 ಅಡಿಗಳ ನೀರು ತುಂಬಿದೆ.

●

ನ್ಯಾಯ ಸುಧಾ

ನವೆಂಬರ್ 1 ರಿಂದ ನ್ಯಾಯ ಸುಧಾ ಎಂಬ ಕನ್ನಡದ ಕಾನೂನು ಪತ್ರಿಕೆ ಪ್ರಕಟವಾಗುವದೆಂದು ಅದರ ಸಂಪಾದಕ ಶ್ರೀ ಕೆ. ಪಿ ರಾವ್ ಬೆಂಗಳೂರಿನಲ್ಲಿ ಪತ್ರಿಕೆಯ ವರಿಗೆ ತಿಳಿಸಿದರು.

★

ಮಹಾವೀರ ಜಯಂತಿ

ಕೊಡಗು ಜಿಲ್ಲೆಯಲ್ಲಿ ಭಗವಾನ್ ಶ್ರೀ ಮಹಾವೀರರ 2500 ನೇ ವರ್ಷದ ಸಮಾರಂಭ ಪ್ರಾರಂಭವಾಗುವುದಾಗಿ ಮಡಿಕೇರಿ ವಾರ್ತೆ.

●

ಚಂಬೈ ನಿಧನ

ಪ್ರಖ್ಯಾತ ಕರ್ನಾಟಕ ಸಂಗೀತ ಗಾಯಕ ಕರಾದ ಚಂಬೈ ವೈದ್ಯನಾಥ ಭಾಗವತರು ಬುಧವಾರ ರಾತ್ರಿ ಕೇರಳದ ಉಟ್ಟುವುಸಾಲ ಮದಲ್ಲಿ ನಿಧನರಾದರು. ಗಮನಾರ್ಹ ವಿಷಯವೆಂದರೆ ಇವರು ಯಾವ ಮನೆಯಲ್ಲಿ ಸತ್ತರೋ ಅಲ್ಲಿ ಚಿಕ್ಕ ವಯಸ್ಸಿನಲ್ಲಿ ಒಂದು ಸಂಗೀತ ಕಚೇರಿಯ ವೃತ್ತಿ ಜೀವಿತವನ್ನು ಪ್ರಾರಂಭಿಸಿದರು

★

ಪೋತಾ ವಜ

ಆಂಧ್ರ ರಾಜ್ಯದಲ್ಲಿ ವಿದ್ಯುತ್ ಬಳಕೆಯಲ್ಲಿ ಮಾಡಿದ್ದ ಪೋತಾವನ್ನು ತೆಗೆದು ಹಾಕಲಾಯಿತೆಂದು ಹೈದರಾಬಾದಿನಿಂದ ವರದಿ ಬಂದಿದೆ.

ದೆಹಲಿಗೆ ಪ್ರಯಾಣ

ಮಂತ್ರಿಮಂಡಲದ ಪುನರ್ರಚನೆ ಕುರಿತು ಕಾಂಗ್ರೆಸ್ ಹೈ ಕಮಾಂಡಿನೊಡನೆ ಚರ್ಚಿಸಲು ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸರು ಗುರುವಾರ ಮಧ್ಯಾಹ್ನ ದೆಹಲಿಗೆ ಪ್ರಯಾಣ ಪಡಾಡಿದರು ಭಾನುವಾರ ಅಲ್ಲಿಂದ ವಾಪಸಾಗುವ ಸಂಭವವಿದೆ.

★

ರಾಜ್ಯಾಂಗ ಕ್ರಮಬದ್ಧತೆ ಪ್ರಶ್ನೆ

ಅಂತರ ಕ್ಷಣ ಕಾನೂನು ರಾಜ್ಯಾಂಗ ಕ್ರಮಬದ್ಧತೆ ಪ್ರಶ್ನಿಸಿ ಪೀಪಲಿಯನ್ ಕಾರ್ಪೆಸ್ ಅರ್ಜಿಗಳನ್ನು ಸ್ವೀಕರಿಸಿ ಅಡ್ವೊಕೇಟ್ ಜನರಲ್‌ರಿಗೆ ನೋಟೀಸು ಜಾರಿ ಪೆ ಸ್ಥಾನಬದ್ಧ ಖೈದಿಗಳನ್ನು ಎ ವರ್ಗದ ರಕ್ಷಣಾ ಖೈದಿಗಳಾಗಿ ಕಾಣಲು ಸಲಹೆ ಮಾಡಿದೆ

★

ಒರಿಸ್ಸಾಕ್ಕೆ ಅಕ್ಕಿ

ಒರಿಸ್ಸಾಕ್ಕೆ ಆಂಧ್ರ ಅಕ್ಕಿಯನ್ನು ಈ ತಿಂಗಳು ಸ್ವಲ್ಪ ಮತ್ತು ಮುಂದಿನ ತಿಂಗಳಿನಿಂದ ಹೆಚ್ಚಾಗಿಯೂ ಕಳಿಸಲು ಒಪ್ಪಿದೆ.

●

ಪಿಯೋಲಿನಲ್ಲಿ ನೂರನೂಗ್ಗ ಕೊಕಡಿ ವಿದ್ಯಾರ್ಥಿ ನಿಲಯದಲ್ಲಿ ಅಗ್ನಿ ಅನಾಹುತವಾಗಿ ಹದಿನಾರು ವಂದಿ ಸತ್ತು ನೂರಾರು ಮಂದಿ ಗಾಯಗೊಂಡರು.

Mysore Races

Saturday 19th October 1974

First Race at 2-30 P. M.

(Carried over Forecast Pool)

Sunday 20-th October, 1974

The Gayatri Devi Memorial Cup

ಪ್ರಧಾನಿಯಿಂದ ಪದಚ್ಯುತಿಗೊಳಿಸಲು

ಹಜಾರಿಬಾಗ್— ಪ್ರಧಾನಿ ಇಂದಿರಾ ರವರು ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ಕೊಡುತ್ತಿರುವರೆಂದೂ, ಅವರನ್ನೂ ಅಧಿಕಾರದಿಂದ ಹೊರದೂಡುವುದು ತಮ್ಮ ಚಳವಳಿಯ ಗುರಿಯೆಂದೂ ಶ್ರೀ ಜಯಪ್ರಕಾಶ ನಾರಾಯಣರು ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು – ನೆಹೂ ತವರು ತಮ್ಮ ಮಂತ್ರಿಮಂಡಲದಿಂದ ತೆಗೆದುಹಾಕಿದ್ದ ಶ್ರೀ ಕೆ. ಡಿ. ಮಾಳವ್ಯರನ್ನು ಇವರು ತಮ್ಮ ಮಂತ್ರಿಮಂಡಲಕ್ಕೆ ಸೇರಿಸಿಕೊಂಡಿರುವರೆಂದು ಹೇಳಿದರು

★

ಉದ್ದಿನ ಕೂದಲು

ಬ್ಯಾಂಕಾಕ್— ವಿದ್ಯಾರ್ಥಿಗಳ ಕೋಳಿಕೆ ಬಗ್ಗೆ ತಾಯಲ್ಯಾಂಡು ಮಂತ್ರಿಮಂಡಲ ಜಗ್ಗಿ ವಿಶ್ವಾರ್ಥಿಗಳು ತಮ್ಮ ತಲೆ ಕೂದಲು ಕಾಲರುವರೆಗೆ ಹೊಂದಿರುವದಕ್ಕೆ ಒಪ್ಪಿದೆ; ಆದರೆ ಸರಿಯಾಗಿ ಬಾಚಿಕೊಂಡಿರಬೇಕೆಂದು ತಿಳಿಸಿದೆ.

●

ಹಣದೊಡನೆ ಪರಾರಿ

ಹುಬ್ಬಳ್ಳಿ— ಬ್ಯಾಂಕ್ ಡ್ರಾಫ್ಟ್ ತರಲು ರೂ. 11239 ತೆಗೆದುಕೊಂಡುಹೋದ ಇಲ್ಲಿಯ ವಿಶ್ವೇಶ್ವರಯ್ಯ ಮಂಡಲಿಯ ಜವಾನನೊ ನಾಪತ್ತೆಯಾಗಿರುವನು – ಪೋಲೀಸರಿಗೆ ದೂರುಕೊಡಲಾಗಿದೆ.

★

ಪಾಂಡಿಚೆರಿ ಲೈಸೆನ್ಸ್ ಸ್ಕ್ಯಾಂಡಲ್

ಹೈದರಾಬಾದು— ಸಿಬಿಐ ತವರು 6 ಕಚೇರಿಗಳನ್ನೂ ಮನೆಗಳನ್ನೂ ಶೋಧಿಸಿ ಪಾಂಡಿಚೆರಿ ಲೈಸೆನ್ಸ್ ಸ್ಕ್ಯಾಂಡಲ್ ಸಂಬಂಧದ ಕಾಗದಪತ್ರಗಳನ್ನು ವಶಪಡಿಸಿಕೊಂಡರು.

★

ಗಫೂರರಿಗೆ ಮುಖ್ಯಮಂತ್ರಿತ್ವ ಹೋಗುತ್ತೆ

ನವದೆಹಲಿ— ಬಿಹಾರು ಶಾಸನ ಸಭಾ ಪಾರ್ಟಿಯಲ್ಲಿ ಗುಂಪುಗಳ ತಿಕ್ಕಾಟ ಹೆಚ್ಚಿದ್ದು ಹೈ ಕಮಾಂಡು ಮುಖ್ಯ ಮಂತ್ರಿ ಗಫೂರರನ್ನು ತೆಗೆದುಹಾಕಲು ನಿರ್ಧರಿಸಿದ್ದು, ಪಾರ್ಟಿಗೆ ಬೇರೆ ನಾಯಕರನ್ನು ಹುಡುಕುತ್ತಿದೆ.

★

ವನಸ್ಪತಿ ವಶ

ಹುಬ್ಬಳ್ಳಿ— ಪರ್ಮಿಟ್ ಇಲ್ಲದೆ ಸಾಗಿಸುತ್ತಿದ್ದ ರೂ. 11700 ಬೆಲೆಯ 70 ಟನ್ನು ಪೋಲೀಸರು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಿದರು.

★

ಭತ್ಯಾಅವಿಮಾನರ ಕೊಲೆ

ಮೊರಲಾಸ್ ರಾಜ್ಯದಲ್ಲಿಯ ಟಿಮಾಕ್ ಗ್ರಾಮಕ್ಕೆ ರಿಟ್ ಜಾರಿಮಾಡಲು ಹೋಪ ಇಬ್ಬರು ಭತ್ಯಅವಿಮಾನರನ್ನು ಗ್ರಾಮಸ್ಥರು ಎದುರಿಸಿ ಅವರನ್ನು ಸ್ಥಳೀಯ ಜೈಲಿನಲ್ಲಿ ಕೂಡಿ ಬೀಗಹಾಕಿ ಜೀವಸಹಿತ ಸುಟ್ಟರು

★

ವರ್ಣವಿಭೇದ ನೀತಿ

ಲಂಡನ್— ಹೌಸ್ ಆಫ್ ಲಾರ್ಡ್ಸ್ ದೇಶದ 4000 ಕಾರ್ಮಿಕರ ಕ್ಲಬ್‌ಗಳು ವರ್ಣೀಯ ಸದಸ್ಯರನ್ನು ಸೇರಿಸದಿರುವ ಹಕ್ಕನ್ನು ಹೊಂದಿವೆಯೆಂದು ತೀರ್ಪಿತ್ತಿದೆ.

★

ಮಟ್ಕಾರಾಜನ ದಸ್ತಗಿರಿ

ಬೆಂಗಳೂರು— ಆದಾಯ ತೆರಿಗೆಯವರು ಒಬ್ಬ ಮಟ್ಕಾ ರಾಜನ ಮತ್ತು ವ್ಯಾಪಾರ ಸ್ಥಳದ ಮೇಲೆ ಧಾಳಿ ನಡೆಸಿ, ಲೆಕ್ಕದಲ್ಲಿ ಕಾಣಿಸದಿದ್ದ ರೂ. 20000 ಹಣ ಮತ್ತು ಪತ್ರಗಳನ್ನು ವಶಪಡಿಸಿಕೊಂಡರು – ಇವನು ತನ್ನ ಮತ್ತು ಸಂಸಾರದವರ ಹೆಸರಿನಲ್ಲಿ ಇನ್‌ಶೂರೆನ್ಸು ಮಾಡಿ ವರ್ಷಕ್ಕೆ ರೂ. 20000 ಪ್ರೀಮಿಯಂ ಕೊಡುತ್ತಿರುವನಂತೆ

ಅಪೀಲು ತಿರಸ್ಕರಿಸಲ್ಪಟ್ಟಿತು

1978 ಕಲ್ಲಿ ಅಕಬರ್ ಭೂಚೋಕ್ಷಾಕಕರು ಒಂದು ಜೋಯಿಂಗ್ ವಿಮಾನವನ್ನು ಅಪಹರಿಸಿ ನಾಶಪಡಿಸಿದ ಸಂಪರ್ಕದಲ್ಲಿ ವಿವಾದಿತ ಕಂಪೆನಿಗೆ ಇಷೂರೆನ್ಸು ಕಂಪೆನಿಗಳು 24 ಮಿಲಿಯ ಡಾಲರು ಪರಿಹಾರ ಕೊಡುವಂತೆ ಕೋರ್ಟು ಆಜ್ಞೆ ವಿರುದ್ಧ ಆ ಬ್ರಿಟಿಷ್ ಮತ್ತು ಅಮೇರಿಕಾ ಇಷೂರೆನ್ಸು ಕಂಪೆನಿಗಳು ಅಮೇರಿಕಾ ಮ್ಯಾಜಿಸ್ಟ್ರೇಟ್ ಫೆಡರಲ್ ಅಪೀಲ್ ಕೋರ್ಟಿನಲ್ಲಿ ಮಾಡಿದ್ದ ಅಪೀಲು ಡಿಸ್ ಮಿಸ್ ಮಾಡಲ್ಪಟ್ಟಿತು.

*

ವಚನಾಮೃತ

ಬಿರುಗಾಳಿ ಬೀಸಿ ಮಳೆ ಮುರಿವಂತಹ ಸುಳುಹ ಸುಳಿಯದೆ
ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು ;
ಸುಳಿದಹೆ ನೆಟ್ಟನೆ ಜಂಗಮವಾಗಿ ಜಂಗಮವಾಗಿ ಸುಳಿಯಬೇಕು ;
ನಿಂದರೆ ನೆಟ್ಟನೆ ಭಕ್ತನಾಗಿ ನಿಲ್ಲಬೇಕು ;
ಸುಳಿದು ಜಂಗಮವಾಗಲರಿಯದ, ನಿಂದು ಭಕ್ತನಾಗಲರಿಯದ;
ಉಭಯ ಭ್ರಷ್ಟರನೇನೆಂಬ ಗುಹೇಶ್ವರ.

— ಅಲ್ಲಮಪ್ರಭುದೇವರು [ವಿಶ್ವಕಲ್ಯಾಣ]

Help The Gerakshana

— Humanitarian Propeganda Monthly....

SHAKTI

SUDHA

A Superb Tonic

Protect the Cow

Contribute Liberally
to the National Defence Fund

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ 18 10 74 ರಿಂದ

ಅವೋಘ 5 ನೇ ವಾರ

ಇಮ್ತಿಹಾನ್ Imtihan

★ ತನುಜ ★ ವಿನೋದ ಖನ್ನ ★ ಬಿಂದು

ಅಭಿನಯಿಸಿರುವ ಅವೋಘ ಹಿಂದಿ ವರ್ಣರಂಜಿತ ಕಲಾಕೃತಿ

ನಿರ್ದೇಶನ – ಮೋದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 5 ಪ್ರದರ್ಶನಗಳು

ಅಪೆರಾ 17 10 74 ರಿಂದ

ಆಗಲೇ ಲಗ್ ಜಾ

ಪಾತ್ರ – ಶಶಿಕಪೂರ್ ಶರ್ಮಿಲಾ ಟಾಗೂರ್ ಶತ್ರುಘ್ನ ಸಿನ್ಹ ಓಂ ಪ್ರಕಾಶ್

ಈಸ್ಟ್‌ಮನ್ ಕಲರ್ ಚಿತ್ರ ಸಂಗೀತ – ಆರ್. ಡಿ. ಬರ್ಮನ್

ನೋಹಕ ಅಭಿನಯದ ಮಹೋನ್ನತ ಈಸ್ಟ್‌ಮನ್ ಕಲರ್
ಹಿಂದಿ ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Edited Printed and Published by Dharmapracharanirata M S Krishna Rao (Proprietor) at the Satyavadi Press, Chamaraja puram Mysore